## ಬದಲಾದರೆ ತಪ್ಪೇನು?

ಜುಲೈ 16ರ ಸಂಚಿಕೆಯಲ್ಲಿ ವಿಶಾಖ ಎನ್. ಅವರು ಬರೆದಿರುವ 'ಬದಲಾಗಿದೆಯೇ ಹಾಸ್ಯದ ಭಾಷೆ' ಲೇಖನ ಓದಿದೆ.ಬದಲಾಗಲೇಬೇಕು. ಅದೇ ಬೀಚಿ, ಅದೇ ಕೈಲಾಸಂ, ಅದೇ ಕಸ್ತೂರಿ, ಅದೇ ಪ್ರಾಣೇಶ್ ಅವರನ್ನು ಎಷ್ಟು ದಿನ ಕೇಳಬೇಕು? ಪೋಲಿ ಸರಕು ಸ್ವಲ್ಪ ಜಾಸ್ತಿಯಾಗಿದೆ ನಿಜ. ಸ್ವಲ್ಪ ಬೋಲ್ಡ್ ಆಗಿರೋದೂ ನಿಜ. ಆದರೆ ಎಲ್ಲವೂ ಜೊಳ್ಳು ಅಲ್ಲ. ಸೋನು ವೇಣುಗೋಪಾಲ್‌ರ ಬಾಜೂಮನೆ ಕಾಕು, ಅಂತಹದೇ ಅನೇಕ ಸ್ಟ್ಯಾಂಡ್ ಅಪ್ ಕಾಮಿಡಿಗಳನ್ನು ಮಾಡುವ ಕೆಲವು ಐಟಿ ಕನ್ನಡ ಮಂದಿ ಚೆನ್ನಾಗಿಯೇ ಮನರಂಜಿಸುತ್ತಿದ್ದಾರೆ. ಪ್ರೀತಿ ಶಾನಭಾಗ್ ಹೇಳುವಂತೆ ಇದು ತಾತ್ಕಾಲಿಕವಿದ್ದರೂ ಫ್ಯಾಂಟಸಿ ಸುಳ್ಳಲ್ಲ.

—ದೇವಿನಾ

ಲೇಖನದಲ್ಲಿ ಉಲ್ಲೇಖಿಸಿರುವ ಯಾವುದೇ ಸ್ಟ್ಯಾಂಡ್ ಅಪ್ ಕಾಮಿಡಿಯನ್‌ಗಳ ಕಾರ್ಯಕ್ರಮ ನಾನು ನೋಡಿಲ್ಲ. ಆದರೆ ನಾನು ಕಂಡುಕೊಂಡ ಸತ್ಯ ಏನೆಂದರೆ — ಈಗ ಹಾಸ್ಯ ಎಂದರೆ ಸೆಕ್ಸ್, ಫಸ್ಟ್‌ನೈಟ್, ಪರಸ್ತ್ರೀಮೋಹ ಇವುಗಳ ಸುತ್ತಲೇ ಸುತ್ತುತ್ತಿರುತ್ತದೆ. ಮಕ್ಕಳು ಹಿರಿಯರೊಂದಿಗೆ ಹಾಸ್ಯ ಕಾರ್ಯಕ್ರಮ ವೀಕ್ಷಿಸುವ ಕಾಲ ಹೋಯಿತು.

—ಶೈಲಾ ಜೋಷಿ



## ಗೀತಕ್ಕನ ಆಪ್ತ ನಪು

ಗೀತಾ ನಾಗಭೂಷಣರ ಬಗೆಗಿನ ಎಂ.ಎಸ್. ಆಶಾದೇವಿ ಅವರ ನುಡಿನಮನ (ಜುಲೈ 16) ಓದಿ ಕಣ್ಣು ಮಂಜಾಯಿತು. ಗೀತಾ ನಾಗಭೂಷಣ ಅವರು 1985–86ರಲ್ಲಿ ಬರೆದ 'ಬದಲಾಗುವ ಬಣ್ಣಗಳು' ಧಾರಾವಾಹಿ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಕೊರವ ಹೆಣ್ಣಿನ ಮನೋಧರ್ಮದ ಕುರಿತ ಆ ಧಾರಾವಾಹಿ ಓದಿದ ಮೇಲೆ ಅವರ ಇತರ ಕಾದಂಬರಿಗಳನ್ನು ತರಿಸಿ ಓದಿದೆ. ಇತ್ತೀಚಿನ ಅವರ 'ಗುಳೆ' ಕಾದಂಬರಿ ಕೂಡ 'ಸುಧಾ'ದಲ್ಲೇ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಇಂತಹ ಅಪೂರ್ವ ಕೃತಿಗಳನ್ನು ನೀಡಿದ ಅವರನ್ನು ಕನ್ನಡದ ಓದುಗರು ಮರೆಯುವಂತಿಲ್ಲ.

—ರಾಘವೇಂದ್ರ, ಕಾರ್ಕಳ

ಕೋವಿಡ್ ಬಿಕ್ಕಟ್ಟಿನ ಅವಧಿಯಲ್ಲಿ ನಮ್ಮನ್ನಗಲಿದ ಸಾಹಿತಿ, ಕಲಾವಿದರಿಗೆ ಗೌರವ–ಶ್ರದ್ಧಾಂಜಲಿ ಸಲ್ಲಲಿಲ್ಲ. ಸಾಹಿತಿ ಗೀತಾ ನಾಗಭೂಷಣ ಅವರು ಇತ್ತೀಚೆಗೆ ತೀರಿಕೊಂಡಾಗ ಇಂತಹದೇ ಅನುಮಾನಗಳಿದ್ದವು. ಆದರೆ 'ಸುಧಾ', 'ಪ್ರಜಾವಾಣಿ' ಆ ಕೊರತೆಯನ್ನು ತಕ್ಕಮಟ್ಟಿಗೆ ನೀಗಿವೆ. ಆಶಾದೇವಿ ಅವರ 'ಕೆಲಸ ಮುಗಿಸಿ ಹೊರಟ ಗೀತಕ್ಕ' ಸಾಂದರ್ಭಿಕವಾದ ಬರಹವಾಗಿದೆ. ಅಂದಹಾಗೆ ಗೀತಾ ಅವರ ಕೊನೆಯ ಕಾದಂಬರಿ 'ಗುಳೆ' ಪ್ರಕಟವಾಗಿದ್ದು 'ಸುಧಾ'ದಲ್ಲಿ.

—ಗುಡಿಹಳ್ಳಿ ನಾಗರಾಜ, ಬೆಂಗಳೂರು

ಸಾರಸ್ವತಲೋಕದ ನಿಜ ಬರಹಗಾರ್ತಿ ಗೀತಾ ನಾಗಭೂಷಣರ ಅಂತರಂಗ ಬಹಿರಂಗದ ಸಾಧನೆಗಳನ್ನು ವಸ್ತುನಿಷ್ಠವಾಗಿ ಚಿತ್ರಣಗೊಂಡಿದ್ದು, 'ಗೀತಾ ನಾಗಭೂಷಣ' ಎಂದರೆ ಅವರಿಗೆ ಅವರೇ ಸಾಟಿ ಎಂಬಂತೆ ಓದುಗರಿಗೆ ಕಟ್ಟಿಕೊಟ್ಟ ಪರಿ ಹೃದಯಂಗಮವಾಗಿದೆ. ಗೀತಾರನ್ನು ಮತ್ತಷ್ಟು ಆಳವಾಗಿ ಓದಬೇಕೆನ್ನಿಸಿತು.

—ಚನ್ನಬಸವ ಪುತ್ತೂರು, ಚಿತ್ರದುರ್ಗ



ಕಡುಬಡತನದ, ಕೆಳವರ್ಗದ, ಅನಕ್ಷರಸ್ಥ ಕುಟುಂಬದಿಂದ ಬಂದ ಗೀತಾ, ವೃತ್ತಿಜೀವನದ ಜೊತೆ ಜೊತೆಗೆ ಸಂಘರ್ಷಯುಕ್ತ ಬದುಕಿನಲ್ಲಿ ಸಾಧಿಸಿದ್ದು ಎಣಿಕೆಗೆ ಸಿಗಲಾರದಷ್ಟು. ಅವರದು ದೈತ್ಯ ಪ್ರತಿಭೆ. ದಲಿತ ಮಹಿಳೆಯರು ಅನುಭವಿಸುವ ಶೋಷಣೆಗಳ ಬಗ್ಗೆ ಜವಾರಿ ಭಾಷೆಯಲ್ಲಿ ಓದುಗರ ಮನ ಕುದಿಯುವಂತೆ ಬರೆದವರು ಅವರು. ಸಾರಸ್ವತಲೋಕದ ಅನೇಕ ಪ್ರತಿಷ್ಠಿತ ಪ್ರಶಸ್ತಿಗಳು ಗೀತಾ ನಾಗಭೂಷಣರವರಿಗೆ ಸಂದಿವೆ. ದಲಿತರ ದನಿ ಗೀತಾರವರ ಬಗ್ಗೆ ಬರೆದ ಲೇಖನ ಪ್ರಶಂಸನೀಯ.

—ಆದಿವಾಲ ಗಂಗಮ್ಮ ಬೆಂಗಳೂರು, ಶಂಕರೇಗೌಡ ತೂಬಿಕೆರೆ ಮಂಡ್ಯ

ಹೆಣ್ಣಿನ ಜನುಮ ಮತ್ತು ಜಾತಿ ವ್ಯವಸ್ಥೆಯ ವಿಕಾರದ ಜೊತೆಗೆ ವರ್ಗ ವ್ಯವಸ್ಥೆಯ ದೌರ್ಜನ್ಯ ಇದ್ದಾಗಲೂ ಮತ್ತು ತನ್ನ ದೇಹದ ಮೇಲೂ ವ್ಯಕ್ತಿತ್ವದ ಮೇಲೂ ಅದೆಂಥ ಆಕ್ರಮಣಗಳಾದಾಗಲೂ ಅದನ್ನು ಮೆಟ್ಟಿ ನಿಂತು ಹೆಣ್ಣು ಬದುಕಬೇಕಾಗಿದೆ. ಈ ನಂಬಿಕೆ ಹುಟ್ಟಿಸುವ ರೀತಿಯಲ್ಲಿ ಗೀತಾ ನಾಗಭೂಷಣ ಅವರ ಬದುಕು–ಬರಹ ಇತ್ತು.

—ಭೀಮಣ್ಣ ಬಸಪ್ಪ ಸುಣಗಾರ, ದಾವಣಗೆರೆ

## ನಗ್ತಾನೆ ಇರ್ತೀವಿ

ಲಾಕ್‌ಡೌನ್‌ನ ಈ ದಿನಗಳಲ್ಲಿ ನೆಚ್ಚಿನ 'ಸುಧಾ' ವಾರಪತ್ರಿಕೆಯನ್ನು ಆನ್‌ಲೈನ್‌ನಲ್ಲಿ ಓದಿ ಖುಷಿಪಟ್ಟೆ. ಕಚಗುಳಿ ಇಡುವ 'ನಕ್ಕುಬಿಡಿ' ಕಾಲಂ ಓದುವ ಮಜಾನೇ ಬೇರೆ. 'ಮಾಡಬೇಕಾದ ಕೆಲಸ ಮುಗಿಸಿಯೇ ಹೊರಟ ಗೀತಕ್ಕ' ಬರಹ ಆತ್ಮೀಯವಾಗಿದೆ. ಗೀತಾ ಅವರ ಸಾಹಿತ್ಯ ಹಸಿಹಸಿ ಎನಿಸಿದರೂ ನಿಗಿನಿಗಿ ಕೆಂಡ ಅಲ್ಲಿರುವುದು. ಪುರುಷ ಪ್ರಧಾನ ವ್ಯವಸ್ಥೆ ಕುರಿತು ಬರೆದ ಅವರ ಸಾಹಿತ್ಯದ ಸಮರ್ಥ ವಿಮರ್ಶೆ ಆಗಲಿಲ್ಲ ಎನಿಸುತ್ತದೆ.

—ಬಿ.ಆರ್. ಅಣ್ಣಾಸಾಗರ, ಸೇಡಂ

## ಕಷಾಯಗಳಿಗಿದು ಕಾಲ

ಡಾ. ವಸುಂಧರಾ ಭೂಪತಿ ಅವರ 'ಮಳೆಗಾಲದ ಕೆಮ್ಮು, ನೆಗಡಿ ಕೊರೊನವಲ್ಲ' ಲೇಖನದಲ್ಲಿ ತಿಳಿಸಿಕೊಟ್ಟ ಕಷಾಯಗಳು ಬಹಳ ಉಪಯುಕ್ತವಾಗಿವೆ. ಈ ಮಳೆಗಾಲದಲ್ಲಿ ಕೊರೊನಾದ ಸಮಯದಲ್ಲಿ ಆಯುರ್ವೇದ ಕಷಾಯಗಳ ಉಪಯೋಗ ಪಡೆದುಕೊಳ್ಳಬೇಕು. ನಮ್ಮ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳಬೇಕು.

—ಸುಜಾತಾ ಬಸವರಾಜ್, ಬೆಂಗಳೂರು

## ವಿಭಾ ಸಾಹಿತ್ಯ ಪ್ರಶಸ್ತಿಗೆ ಆಹ್ವಾನ

'ವಿಭಾ ಸಾಹಿತ್ಯ ಪ್ರಶಸ್ತಿ2020'ಕ್ಕಾಗಿ ಮೂವತ್ತಕ್ಕೂ ಹೆಚ್ಚು ಸ್ವರಚಿತ ಕವಿತೆಗಳ ಹಸ್ತಪ್ರತಿಯನ್ನು ಆಹ್ವಾನಿಸಲಾಗಿದೆ. ಪ್ರಶಸ್ತಿ 10,000 ನಗದು ಮತ್ತು ಪ್ರಶಸ್ತಿ ಫಲಕ ಒಳಗೊಂಡಿದೆ. ಡಿಟಿಪಿ ಮಾಡಿದ ಹಸ್ತಪ್ರತಿ ಕಳಿಸಿಕೊಡಬೇಕು. ಹಸ್ತಪ್ರತಿ ಕಳುಹಿಸಲು ಕೊನೆಯ ದಿನಾಂಕ: ಆಗಸ್ಟ್ 1.

ವಿಳಾಸ: ಪ್ರಕಾಶ ಸುನಂದಾ ಕಡಮೆ, ಸಂಚಾಲಕರು, ವಿಭಾ ಸಾಹಿತ್ಯ ಪ್ರಶಸ್ತಿ 2020, ನಂ. 90, ನಾಗಸುಧೆ, 6/ಬಿ ಕ್ರಾಸ್, ಕಾಳಿದಾಸನಗರ, ವಿದ್ಯಾನಗರ ವಿಸ್ತೀರ್ಣ, ಹುಬ್ಬಳ್ಳಿ 580031

ದೂರವಾಣಿ: 9845779387